ಸ್ಥಾಪನೆ : 1964

# ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,



# THE JANATHA CO-OPERATIVE BANK LTD.

ಕೇಂದ್ರ ಕಛೇರಿ : 156, 17ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಪಶ್ಚಿಮ, ಬೆಂಗಳೂರು – 560 055.

Ph : 080-2334 1972, 2344 9450, 2344 2648, Fax : 080-41281917
E-mail: gm@jcbank.in, Website : www.jcbank.in

## ಸರ್ವ ಸದಸ್ಯರ ಸಭೆಯ ಸೂಚನಾ ತಿಳುವಳಿಕೆ

ಬ್ಯಾಂಕಿನ 2025–26ನೇ ಸಾಲಿನ 61 ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ 09.08.2026 ರ ಭಾನುವಾರ ಬೆಳಿಗ್ಗೆ 9.30 ಗಂಟೆಗೆ ಸರಿಯಾಗಿ ವೈ.ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ, (ಗೋಪಾಲ್ ಟಾಕೀಸ್ ಪಕ್ಕ) ಬೆಂಗಳೂರು–22 ಇದರ ಆವರಣದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ.ಸಿ.ಎಲ್.ಮರಿಗೌಡರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸದರಿ ಸಭೆಯಲ್ಲಿ ಈ ಕೆಳಗೆ ಸೂಚಿಸಿರುವ ವಿಷಯಗಳನ್ನು ಕುರಿತು ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕಾಗಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳಲಾಗಿದೆ.

### ವಿಷಯಗಳು

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ನಿಧನ ಹೊಂದಿದ ಸದಸ್ಯರಿಗೆ ಸಂತಾಪ ಸೂಚಿಸುವುದು.
4. ಸರ್ವಸದಸ್ಯರ ಸಭೆಯ ಸೂಚನಾ ತಿಳುವಳಿಕೆಯನ್ನು ಓದಿ ದಾಖಲಿಸುವುದು.
5. 2024–25ನೇ ಸಾಲಿನ ಸಾಮಾನ್ಯ ಸಭೆಯ ನಡವಳಿಕೆಯನ್ನು ಓದಿ ದಾಖಲಿಸುವುದು.
6. 2025–26ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಓದಿ ದಾಖಲಿಸುವುದು.
7. ದಿನಾಂಕ 31.03.2026 ಕ್ಕೆ ಅಖೈರುಗೊಂಡ ಆಡಿಟ್ ಆದ ಹಣಕಾಸು ತಃಖ್ತೆಗಳನ್ನು ಅಂಗೀಕರಿಸುವುದು ಮತ್ತು ವರ್ಷದ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಯ ಪರಿಶೀಲನೆ.
8. 2025–26ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
9. 2025–2026ನೇ ಸಾಲಿನ ಅಂದಾಜು ಮೊಬಲಗಿಗಿಂತ ಹೆಚ್ಚಾಗಿ ಆಗಿರುವ ವೆಚ್ಚಗಳ ಅನುಮೋದನೆ ಮತ್ತು 2026–27ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಅಂಗೀಕರಿಸುವುದು.
10. ಆಡಳಿತ ಮಂಡಳಿಯು ರೂಪಿಸಿರುವ ಬ್ಯಾಂಕಿನ ಮುಂಬರುವ ವರ್ಷದ ಕಾರ್ಯ ಚಟುವಟಿಕೆಗಳ ಪರಿಶೀಲನೆ.
11. ಬ್ಯಾಂಕಿಗೆ ಅಗತ್ಯ ಬಿದ್ದಲ್ಲಿ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲದ ಗರಿಷ್ಟ ಮಿತಿಯನ್ನು ನಿಗಧಿಪಡಿಸುವುದು.
12. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ಕಲಂ 30(1ಎ) ರನ್ವಯ 2026–27ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯೊಂದಿಗೆ ನೇಮಕ ಮಾಡಿಕೊಳ್ಳುವುದನ್ನು ಅನುಮೋದಿಸುವುದು.
13. ಬ್ಯಾಂಕಿನ ಸಿಬ್ಬಂದಿ ವೃಂದಬಲ ಮತ್ತು ನೌಕರರಿಗೆ ಕೊಡಲಾಗುವ ವೇತನ, ವೇತನ ಶ್ರೇಣಿ, ತುಟ್ಟಿಭತ್ಯೆ ಮತ್ತು ಇತರೆ ಆರ್ಥಿಕ ಸೌಲಭ್ಯಗಳು ಹಾಗೂ ಕರ್ನಾಟಕ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ವೇತನ ಪರಿಷ್ಕರಣಾ ಸಮಿತಿ ಕಾಲಕಾಲಕ್ಕೆ ಮಾಡುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲನೆ.
14. ಬ್ಯಾಂಕಿನ ಸದಸ್ಯರು ಮತ್ತು ನಿರ್ದೇಶಕರು ಬಳಸಬಹುದಾದ ಸೇವೆಗಳ ವಿಮರ್ಶೆ.
15. ಆಡಳಿತ ಮಂಡಳಿ ಮತ್ತು ಉಪಸಮಿತಿ ಸಭೆಗಳಿಗೆ ಹಾಜರಾಗುವ ನಿರ್ದೇಶಕರುಗಳಿಗೆ ಮತ್ತು ಪದಾಧಿಕಾರಿಗಳಿಗೆ ಸಂದಾಯವಾಗುತ್ತಿರುವ ಉಪಸ್ಥಿತಿಯ ಸಂಭಾವನೆ ಬಗ್ಗೆ ವಿಮರ್ಶೆ ಹಾಗೂ ಅವರ ಸ್ಥಾನದಲ್ಲಿನ ಕರ್ತವ್ಯಕ್ಕೆ ಅನುಗುಣವಾಗಿ ನೀಡುತ್ತಿರುವ ಪ್ರಯಾಣ ಭತ್ಯೆ ಹಾಗೂ ಸಂಬಂಧಪಟ್ಟ ಸಭೆಗಳಲ್ಲಿ ಅವರ ಹಾಜರಾತಿಯನ್ನು ಅವಲೋಕಿಸುವುದು.
16. ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ವಿಮರ್ಶೆ.
17. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ ವಿಮರ್ಶೆ.
18. ಬ್ಯಾಂಕು ತನ್ನ ನಿಧಿಗಳನ್ನು ಕಾಯ್ದೆ ಕಲಂ 58ರ ಪ್ರಕಾರ ತೊಡಗಿಸಲು ಅನುಮತಿ ನೀಡುವುದು.
19. ಬ್ಯಾಂಕಿನ ಉಪವಿಧಿಗಳಿಗೆ (ಬೈಲಾಗೆ) ಸೂಚಿಸಿರುವ ಕೆಲವೊಂದು ತಿದ್ದುಪಡಿ.
20. ಸದಸ್ಯರು ಲಿಖಿತ ಮೂಲಕ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಚರ್ಚೆ.
21. ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳನ್ನು ಪ್ರಸ್ತಾಪಿಸುವುದು.
22. ವಂದನಾರ್ಪಣೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/–
(ಶ್ರೀಮತಿ ವಿನೋದ ಶಿವರಾಮಯ್ಯ)
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ದಿನಾಂಕ: 20–07–2026
ಸ್ಥಳ: ಬೆಂಗಳೂರು

# ಸೂಚನೆ

- ಸರ್ವಸದಸ್ಯರ ಸಭೆಯಲ್ಲಿ ಚರ್ಚೆಗೆ ವಿಷಯಗಳು ಏನಾದರೂ ಇದ್ದಲ್ಲಿ ಅಂತಹ ವಿಷಯಗಳನ್ನು ಲಿಖಿತವಾಗಿ ಸದಸ್ಯರು ಸಭೆ ನಡೆಯುವ 5 ದಿನಗಳ ಮುಂಚಿತವಾಗಿ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ ಸಲ್ಲಿಸುವುದು.
- ಲೆಕ್ಕಪರಿಶೋಧನಾ ವರದಿಯನ್ನು ದಿನಾಂಕ 03.08.2026 ರ ನಂತರ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಸಂಬಂಧಪಟ್ಟ ಶಾಖೆಗಳಲ್ಲಿ ಪಡೆಯಬಹುದು.
- ಸದಸ್ಯರು ವಾರ್ಷಿಕ ಮಹಾ ಸಭೆಗೆ ಬರುವಾಗ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು.
- ಎಲ್ಲಾ ಸದಸ್ಯರು ತಪ್ಪದೆ ಹಾಜರಿ ಪುಸ್ತಕದಲ್ಲಿ ಸಹಿ ಹಾಕತಕ್ಕದ್ದು.
- ವಿಳಾಸ ಬದಲಾವಣೆ ಇದ್ದಲ್ಲಿ ಅಥವಾ ದೂರವಾಣಿ ಸಂಖ್ಯೆಯ ಬದಲಾವಣೆ ಇದ್ದಲ್ಲಿ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಮರು ಕೆ.ವೈ.ಸಿ ದಾಖಲಾತಿಗಳನ್ನು ನೀಡುವುದು.
- ಸುಸ್ತಿ ಸಾಲಗಾರ ಸದಸ್ಯರಾಗಿದ್ದರೆ ಅಥವಾ ಕಳೆದ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ವರ್ಷಗಳಲ್ಲಿ ಕನಿಷ್ಟ ವ್ಯವಹಾರ ಮಾಡದೇ ಇರುವ ಸದಸ್ಯರಿಗೆ ಅಥವಾ ಹಿಂದಿನ ಐದು ವಾರ್ಷಿಕ ಸರ್ವಸದಸ್ಯರ ಸಭೆಗಳಲ್ಲಿ ಕನಿಷ್ಠ ಎರಡು ಸಭೆಗಳಿಗೆ ಹಾಜರಾಗದೆ ಇರುವ ಸದಸ್ಯರುಗಳಿಗೆ ಸಭೆ ನಡವಳಿಗಳಲ್ಲಿ ಪಾಲ್ಗೊಳ್ಳುವ ಮತ್ತು ಮುಂಬರುವ ಚುನಾವಣೆಯಲ್ಲಿ ಮತ ಚಲಾಯಿಸಲು ಹಕ್ಕಿರುವುದಿಲ್ಲ.
- ಅನುತ್ಪಾದಕ ಸಾಲಗಳ ಪ್ರಮಾಣವನ್ನು ಹತೋಟಿಗೆ ತರುವ ನಿಟ್ಟಿನಲ್ಲಿ ಎಲ್ಲಾ ಸಾಲಗಾರರ ಸಾಲದ ಕಂತು ಮರುಪಾವತಿ ದಿನಾಂಕವನ್ನು ಪ್ರತೀ ತಿಂಗಳ 10ನೇ ತಾರೀಖಿಗೆ ನಿಗಧಿಪಡಿಸಲಾಗಿದ್ದು ಮಾನ್ಯ ಸಾಲಗಾರ ಸದಸ್ಯರು ಸಹಕರಿಸಬೇಕಾಗಿ ವಿನಂತಿ ಹಾಗೂ ಕ್ರಮಬದ್ಧವಾಗಿ ಪಾವತಿ ಮಾಡುವ ಸಾಲಗಾರರಿಗೆ ಪಾವತಿಸುವ ಬಡ್ಡಿಯಲ್ಲಿ ಶೇ.10% ರಷ್ಟು ರಿಯಾಯಿತಿ ನೀಡಲಾಗುತ್ತಿದ್ದು ಸದರಿ ಸೌಲಭ್ಯ ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ.
- ಸದಸ್ಯರಿಗೆ ಬೆಳಿಗ್ಗೆ 9.00 ರಿಂದ 11.00 ಗಂಟೆಯವರೆಗೆ ಉಪಹಾರ ವ್ಯವಸ್ಥೆ ಮಾಡಲಾಗಿದೆ ಹಾಗೂ ಸರ್ವಸದಸ್ಯರ ಸಭೆಗೆ ಹಾಜರಾಗುವ ಪ್ರತೀ ಸದಸ್ಯರ ಉಳಿತಾಯ ಖಾತೆಗೆ ಪ್ರಯಾಣ ಭತ್ಯೆ ರೂ.500/-ಗಳನ್ನು ಜಮಾ ಮಾಡಲಾಗುವುದು, ಮಾನ್ಯ ಸದಸ್ಯರು ಹಾಜರಾಗುವ ಮುನ್ನ ದಯಮಾಡಿ ತಮ್ಮ ಸದಸ್ಯತ್ವದ ಖಾತೆ ಸಂಖ್ಯೆ ಹಾಗೂ ಉಳಿತಾಯ ಖಾತೆ ಸಂಖ್ಯೆಗಳನ್ನು ತಪ್ಪದೇ ಹಾಜರಾತಿ ಪುಸ್ತಕದಲ್ಲಿ ನಮೂದಿಸಿ ಸಹಿ ಮಾಡುವ ಮೂಲಕ ಸಹಕರಿಸಬೇಕಾಗಿ ವಿನಂತಿಸಿಕೊಳ್ಳಲಾಗಿದೆ.

ಈ ಕೆಳಕಂಡ ವರ್ಗದ ಸದಸ್ಯರು ಒಂದು ವರ್ಷದ ಅವಧಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ ಅಥವಾ ಮಂಡಳಿ ಸದಸ್ಯರ ಚುನಾವಣೆಯಲ್ಲಿ ಮತ ಚಲಾಯಿಸುವ ತಮ್ಮ ಹಕ್ಕನ್ನು ಕಳೆದುಕೊಳ್ಳುತ್ತಾರೆ. (ಪ್ರಸಕ್ತ ಸಾಲಿನಲ್ಲಿ ಶಿಫಾರಸ್ಸು ಮಾಡಿರುವ ಉಪವಿಧಿಯ ತಿದ್ದುಪಡಿಯನ್ನು ಆಧರಿಸಿ).

ಎ) ಕಳೆದ ಐದು ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಗಳ ಪೈಕಿ ಎರಡು ವಾರ್ಷಿಕ ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪಿದ ಸದಸ್ಯರುಗಳು ಅಥವಾ ಪ್ರತಿನಿಧಿಗಳು.

ಬಿ) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ಧಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಈ ಕೆಳಕಂಡ ಕನಿಷ್ಟ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂತಹ ಸದಸ್ಯರು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ಕನಿಷ್ಟ ಠೇವಣಿ ರೂ. 500/- ಅಥವಾ ಕನಿಷ್ಟ ಅವಧಿಯ ಮಾಸಿಕ ರೂ. 100/- ಗಳ ಆವರ್ತ ಠೇವಣಿ.

ಅಥವಾ

ಸಕ್ರಿಯ ಉಳಿತಾಯ ಖಾತೆ ಅಥವಾ ಚಾಲ್ತಿಖಾತೆ ಹೊಂದಿದ್ದು (Active Account) ಖಾತೆಯಲ್ಲಿ ಕನಿಷ್ಟ ರೂ. 500/-ಗಳ ಧನ ಶಿಲ್ಕು ನಿರ್ವಹಣೆ ಮಾಡಿರತಕ್ಕದ್ದು.

ಅಥವಾ

ನಿಯಮಗಳಿಗೆ ಒಳಪಟ್ಟು ಸಾಲ/ಭದ್ರತಾ ಕಪಾಟು ಪಡೆಯುವುದು.

ಬ್ಯಾಂಕಿನ ಉಪನಿಯಮ 11 ರ ಅನ್ವಯ ಬ್ಯಾಂಕಿನ ಸದಸ್ಯರು ಕನಿಷ್ಠ ಷೇರು ಮೊಬಲಗು ರೂ. 1,000/- ಗಳನ್ನು ಹೊಂದಿರಬೇಕಾಗಿರುತ್ತದೆ. ಕನಿಷ್ಟ ಮೊಬಲಗು ಹೊಂದಿರದಂತಹ ಸದಸ್ಯರ ಸದಸ್ಯತ್ವವನ್ನು ಮುಕ್ತಾಯಗೊಳಿಸಿ ಷೇರು ಧನವನ್ನು ಷೇರು ಅಮಾನತ್ತು ಖಾತೆಗೆ ವರ್ಗಾಯಿಸಬೇಕಾಗುತ್ತದೆ. ಆದ್ದರಿಂದ ರೂ. 1,000/- ಕ್ಕಿಂತ ಕಡಿಮೆ ಷೇರು ಧನ ಹೊಂದಿರುವ ಮಾನ್ಯ ಸದಸ್ಯರುಗಳು ದಿನಾಂಕ 30.07.2026 ರೊಳಗೆ ಷೇರು ಮೊಬಲಗನ್ನು ರೂ. 1,000/- ಇರುವಂತೆ ತಮ್ಮ ಷೇರುಖಾತೆಗೆ ಜಮಾ ಮಾಡಬೇಕಾಗಿ ಕೋರಲಾಗಿದೆ ಹಾಗೂ ಷೇರು ಮೊತ್ತವು 100/- ರ ಗುಣಾಂಕದಲ್ಲಿರುವಂತೆ ನೋಡಿಕೊಳ್ಳತಕ್ಕದ್ದು.

# –: ಅಧ್ಯಕ್ಷರ ಮನದಾಳದ ಮಾತು :–



ಆತ್ಮೀಯ ಸದಸ್ಯ ಬಂಧುಗಳೇ,

ನಮ್ಮ ನಿಮ್ಮೆಲ್ಲರ ಮೆಚ್ಚಿನ ದಿ ಜನತಾ ಕೋ–ಆಪರೇಟೀವ್ ಬ್ಯಾಂಕಿನ ಸಂಸ್ಥಾಪಕರುಗಳು ಹಾಗೂ ಬ್ಯಾಂಕಿನ ಬೆಳವಣಿಗೆಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಹಿರಿಯ ಚೇತನಗಳನ್ನು ಸ್ಮರಿಸುತ್ತಾ ತಮ್ಮೆಲ್ಲರನ್ನು ಬ್ಯಾಂಕಿನ 61ನೇ ವಾರ್ಷಿಕ ಮಹಾಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಬ್ಯಾಂಕು ತಾತ್ಕಾಲಿಕ ಹಿನ್ನಡೆಯಿಂದ ಹೊರಬಂದು ಕಳೆದೆರಡು ವರ್ಷಗಳಿಂದ ತನ್ನ ಆರ್ಥಿಕ ಸದೃಢತೆಯನ್ನು ಪುನರ್ ಸ್ಥಾಪಿಸಿಕೊಂಡಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ದಿನಾಂಕ 31.03.2026ಕ್ಕೆ ಅಖೈರುಗೊಂಡ ಆರ್ಥಿಕ ವರ್ಷದ ಲೆಕ್ಕಪತ್ರಗಳನ್ನು ಮೆ॥ ಜಿ.ಆರ್.ಎಸ್.ಎಂ ಅಂಡ್ ಅಸೋಸಿಯೇಟ್ಸ್ ಲೆಕ್ಕಪರಿಶೋಧಕರು ಪರಿಶೀಲಿಸಿ ವರದಿ ನೀಡಿರುತ್ತಾರೆ. ಲೆಕ್ಕಪರಿಶೋಧನಾ ವರದಿ ಪ್ರಕಾರ ಬ್ಯಾಂಕು "ಎ" ಶ್ರೇಣಿ ಪಡೆದಿರುತ್ತದೆ.

ದಿನಾಂಕ 31.03.2026 ರ ಅಂತ್ಯಕ್ಕೆ ಬ್ಯಾಂಕು ರೂ. 823.45 ಕೋಟಿಗಳ ದುಡಿಯುವ ಬಂಡವಾಳ ಹೊಂದಿದ್ದು, ಇದರಲ್ಲಿ ಹೊರಗಿನ ಠೇವಣಿಯ ಪಾಲು ರೂ. 647.05 ಕೋಟಿ ಯಷ್ಟಾಗಿರುತ್ತದೆ. ಬ್ಯಾಂಕಿನ ಸ್ವಂತ ಬಂಡವಾಳ ರೂ. 156.86 ಕೋಟಿ ರಷ್ಟಿರುವುದು ಆರ್ಥಿಕ ಸದೃಢತೆಯ ಸಂಕೇತವಾಗಿರುತ್ತದೆ. ದಿನಾಂಕ 31.03.2026 ರ ಅಂತ್ಯಕ್ಕೆ ಬ್ಯಾಂಕು ತನ್ನೆಲ್ಲಾ ಖರ್ಚು–ವೆಚ್ಚಗಳನ್ನು ಕಳೆದು ನಿಯಮಾನುಸಾರ ಪಾವತಿಸಬೇಕಾದ ಆದಾಯ ತೆರಿಗೆ ಪಾವತಿಸಿದ ನಂತರ ರೂ. 11.34 ಕೋಟಿಗಳ ನಿವ್ವಳ ಲಾಭಗಳಿಸಿದೆ. ಇದೇ ಅವಧಿಯಲ್ಲಿ ಬ್ಯಾಂಕಿನ ನಿವ್ವಳ ಅನುತ್ಪಾದಕ ಸಾಲಗಳ ಪ್ರಮಾಣ ಶೂನ್ಯಕ್ಕೆ ಇಳಿದಿರುವುದು ನಮ್ಮ ಸಿಬ್ಬಂದಿ ವರ್ಗದವರ ಕಾರ್ಯ ದಕ್ಷತೆಗೆ ಸಾಕ್ಷಿಯಾಗಿರುತ್ತದೆ. ತಮ್ಮೆಲ್ಲರಿಗೂ ತಿಳಿದಿರುವಂತೆ ಬ್ಯಾಂಕು ಅತ್ಯಂತ ಕನಿಷ್ಠ ಸಂಖ್ಯೆಯ ಖಾಯಂ ಸಿಬ್ಬಂದಿ ಹೊಂದಿದ್ದು, ಅವರ ಕಠಿಣ ಪರಿಶ್ರಮದ ಕಾರಣದಿಂದಾಗಿ ಬ್ಯಾಂಕು ಉತ್ತಮ ಫಲಿತಾಂಶ ಗಳಿಸುವಂತಾಗಿದೆ. ಪ್ರಸ್ತುತ ಬಹುತೇಕ ಹಿರಿಯ ನೌಕರರು ವಯೋನಿವೃತ್ತಿ ಹೊಂದುತ್ತಿರುವುದರಿಂದ ಅನುಭವಿ ನೌಕರರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು, ಸಂಸ್ಥೆಯ ಭವಿಷ್ಯದ ಬೆಳವಣಿಗೆ ದೃಷ್ಟಿಯಿಂದ ಖಾಯಂ ಸಿಬ್ಬಂದಿ ಕೊರತೆಯನ್ನು ನಿವಾರಿಸಲೇ ಬೇಕಾಗಿದೆ. ಮುಂದಿನ ದಿನಗಳಲ್ಲಿ ಸಹಕಾರ ಇಲಾಖೆಯ ಮಾರ್ಗದರ್ಶನದಲ್ಲಿ ಈ ಕೊರತೆಯನ್ನು ನಿವಾರಿಸಲು ಪ್ರಯತ್ನಿಸಲಾಗುವುದು. ಬ್ಯಾಂಕು ಹೆಚ್ಚಿನ ಹೊಸ ಶಾಖೆಗಳನ್ನು ತೆರೆಯಲು ಉತ್ತಮ ಅವಕಾಶವಿದ್ದು, ಮುಂದಿನ ದಿನಗಳಲ್ಲಿ ಈ ಬಗ್ಗೆ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ಇತ್ತೀಚೆಗೆ ಭಾರತೀಯ ರಿಸರ್ವ್ ಬ್ಯಾಂಕು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ಮಾಡಿದ್ದು, ಇದರ ಪರಿಣಾಮ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಸ್ವರೂಪದಲ್ಲಿ ಮಹತ್ತರ ಬದಲಾವಣೆಗಳಾಗುವ ಸಂಭವವಿರುತ್ತದೆ. ಈ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕಿನ ಸ್ಪಷ್ಟೀಕರಣದ ನಿರೀಕ್ಷಣೆಯಲ್ಲಿದ್ದು, ಸ್ಪಷ್ಟೀಕರಣ ಹಾಗೂ ಅಂತಿಮ ಆದೇಶ ಬಂದ ನಂತರ ಅಗತ್ಯ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ಒಂದು ಸಂಸ್ಥೆ ಪ್ರಗತಿ ಪಥದಲ್ಲಿ ಮುನ್ನಡೆದಿದೆ ಎಂದರೆ ಅದು ಕೇವಲ ಒಬ್ಬ ವ್ಯಕ್ತಿಯಿಂದ ಸಾಧ್ಯವಾಗುವುದಿಲ್ಲ ಅಂತಹ ಸಾಧನೆಯ ಹಿಂದೆ ಅನೇಕ ವ್ಯಕ್ತಿಗಳ ಪರಿಶ್ರಮವಿರುತ್ತದೆ. ನಮ್ಮ ಬ್ಯಾಂಕಿನ ವಿಷಯದಲ್ಲಿ ಹೇಳುವುದಾದರೆ ಉಪಾಧ್ಯಕ್ಷರಾದ ಶ್ರೀ.ಬಿ.ಅರವಿಂದ ಹಾಗೂ ಆಡಳಿತ ಮಂಡಳಿಯ ಎಲ್ಲಾ ಸದಸ್ಯರ ಸಹಕಾರದ ಜೊತೆಗೆ ಸಿಬ್ಬಂದಿ ಮಿತ್ರರ ಪರಿಶ್ರಮದಿಂದಾಗಿ ಬ್ಯಾಂಕು ಉತ್ತಮ ಸ್ಥಿತಿಗೆ ತಲುಪಿದೆ ಎಂದರೆ ತಪ್ಪಾಗಲಾರದು ಅದಕ್ಕಾಗಿ ಅವರೆಲ್ಲರಿಗೂ ಪ್ರೀತಿ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ಆಡಳಿತ ಹಾಗೂ ವ್ಯವಹಾರಗಳ ಸುಗಮ ನಿರ್ವಹಣೆಗಾಗಿ ವ್ಯವಸ್ಥಾಪನಾ ಮಂಡಳಿ ಹಾಗೂ ಸಲಹಾ ಸಮಿತಿ ರಚಿಸಲಾಗಿದ್ದು, ಇವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸದಸ್ಯರುಗಳು ವಿವಿಧ ಕ್ಷೇತ್ರಗಳಲ್ಲಿ ತಾವು ಗಳಿಸಿರುವ ಅನುಭವವನ್ನು ಬ್ಯಾಂಕಿನ ಅಭಿವೃದ್ಧಿಗಾಗಿ ವಿನಿಯೋಗಿಸುವ ಮೂಲಕ ನಮಗೆ ಸಹಕಾರ ನೀಡುತ್ತಿದ್ದಾರೆ ಅವರ ಸಹಕಾರಕ್ಕಾಗಿ ಕೃತಜ್ಞಾ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಹಾಗೆಯೇ ಕಾನೂನು ಸಲಹೆಗಾರರು, ಮೌಲ್ಯಮಾಪಕರು, ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳು, ಲೆಕ್ಕಪರಿಶೋಧಕರು ಇವರುಗಳೆಲ್ಲರ ಸಲಹೆ ಸಹಕಾರದಿಂದಾಗಿ ಬ್ಯಾಂಕು ಒಂದು ಉತ್ತಮ ಸಂಸ್ಥೆಯಾಗಿ ರೂಪುಗೊಂಡಿದೆ ಅದಕ್ಕಾಗಿ ಅವರೆಲ್ಲರಿಗೂ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಷ್ಟದ ಸಮಯದಲ್ಲಿ ನಮ್ಮಿಂದ ದೂರ ಹೋಗದೆ ತಮ್ಮ ಬ್ಯಾಂಕಿಂಗ್ ವ್ಯವಹಾರಗಳನ್ನು ನಮ್ಮೊಂದಿಗೆ ಮುಂದುವರೆಸುವ ಮೂಲಕ ಸಹಕರಿಸಿದ, ನಮ್ಮೆಲ್ಲಾ ಗ್ರಾಹಕ ಬಂಧುಗಳಿಗೆ ಅಭಿಮಾನದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ತಾವೆಲ್ಲರೂ ದಿನಾಂಕ 09.08.2026 ಭಾನುವಾರದಂದು ಹೆಚ್ಚಿನ ಸಂಖ್ಯೆಯಲ್ಲಿ ಸಭೆಗೆ ಹಾಜರಾಗುವ ಮೂಲಕ ಬ್ಯಾಂಕಿನ ಬಗ್ಗೆ ನಿಮಗಿರುವ ಬದ್ಧತೆಯನ್ನು ಪ್ರದರ್ಶಿಸುತ್ತೀರೆಂದು ನಂಬಿರುತ್ತೇನೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ
ಸಹಿ/–
**ಸಿಎಲ್. ಮರಿಗೌಡ**
ಅಧ್ಯಕ್ಷರು

## –: ವಿಶೇಷ ಸೂಚನೆ :–

### ಹಿರಿಯ ಸದಸ್ಯರಿಗೆ ಸನ್ಮಾನ

ದಿನಾಂಕ 08.08.2026 ರ ಶನಿವಾರ ಬೆಳಿಗ್ಗೆ 10.00 ರಿಂದ 1.00 ಗಂಟೆಯವರೆಗೆ

ದಿನಾಂಕ 31.03.2026ಕ್ಕೆ 75 ವರ್ಷ ತುಂಬಿದ ಹಿರಿಯ ಸದಸ್ಯರು, ಸದಸ್ಯರಾಗಿ ಕನಿಷ್ಟ 5 ವರ್ಷ ಪೂರೈಸಿದಲ್ಲಿ ಸನ್ಮಾನ ಸ್ವೀಕರಿಸಲು ಅರ್ಹರಾಗಿರುತ್ತಾರೆ.

ಈ ಸಂಬಂಧ ದಿನಾಂಕ 08.08.2026 ರ ಶನಿವಾರ ಬೆಳಿಗ್ಗೆ 10 ರಿಂದ 1.00 ಗಂಟೆಯವರೆಗೆ ವೈ.ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ, (ಗೋಪಾಲ್ ಟಾಕೀಸ್ ಪಕ್ಕ) ಬೆಂಗಳೂರು–22 ಇಲ್ಲಿ ಸಮಾರಂಭ ಏರ್ಪಡಿಸಲಾಗಿದೆ. ಅರ್ಹ ಸದಸ್ಯರು ತಾವು ವ್ಯವಹರಿಸುವ ಶಾಖೆಗಳಲ್ಲಿ ಅರ್ಜಿ ನಮೂನೆ ಪಡೆದು ತಮ್ಮ ವಿವರಗಳನ್ನು ಆಯಾ ಶಾಖಾ ವ್ಯವಸ್ಥಾಪಕರಿಗೆ ದಿನಾಂಕ 31.07.2026 ರ ಒಳಗಾಗಿ ಸಲ್ಲಿಸಲು ವಿನಂತಿಸಿಕೊಳ್ಳಲಾಗಿದೆ.

### ಸಾಂಸ್ಕೃತಿಕ ಕಾರ್ಯಕ್ರಮ

ದಿನಾಂಕ 08.08.2026 ರ ಶನಿವಾರ ಸಂಜೆ 3.00 ರಿಂದ 5.00 ಗಂಟೆಯವರೆಗೆ.

### ಪ್ರತಿಭಾ ಪುರಸ್ಕಾರ ಸಮಾರಂಭ

ದಿನಾಂಕ 08.08.2026 ರ ಶನಿವಾರ ಸಂಜೆ 5.00 ಘಂಟೆಗೆ

2025–26ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ / ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಶೇ. 85% ಮತ್ತು ಅದಕ್ಕಿಂತ ಹೆಚ್ಚು ಹಾಗೂ ಕನ್ನಡ ಮಾಧ್ಯಮದಲ್ಲಿ ಶೇ. 70% ಮತ್ತು ಅದಕ್ಕಿಂತ ಹೆಚ್ಚಿನ ಅಂಕ ಗಳಿಸಿದವರಿಗೆ ಹಾಗೂ ರಾಜ್ಯ / ರಾಷ್ಟ್ರ / ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಕ್ಷೇತ್ರದಲ್ಲಿ ಚಿನ್ನ / ಬೆಳ್ಳಿ / ಕಂಚು ಪದಕ ಪಡೆದವರನ್ನು ದಿನಾಂಕ 08.08.2026 ರಂದು ಶನಿವಾರ ಸಂಜೆ 5.00 ಗಂಟೆಗೆ ವೈ.ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ, (ಗೋಪಾಲ್ ಟಾಕೀಸ್ ಪಕ್ಕ), ಬೆಂಗಳೂರು–560022 ಇಲ್ಲಿ ಪುರಸ್ಕರಿಸಲು ನಿರ್ಧರಿಸಲಾಗಿದೆ. ಸದರಿ ಪುರಸ್ಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲು ಅರ್ಹ ಮಕ್ಕಳ ಪೋಷಕ ಸದಸ್ಯರು (ತಂದೆ / ತಾಯಿ) ತಾವು ವ್ಯವಹರಿಸುವ ಶಾಖೆಗಳಲ್ಲಿ ಅರ್ಜಿ ನಮೂನೆ ಪಡೆದು ತಮ್ಮ ವಿವರಗಳನ್ನು ಆಯಾ ಶಾಖಾ ವ್ಯವಸ್ಥಾಪಕರಿಗೆ ದಿನಾಂಕ 31.07.2026 ರ ಒಳಗಾಗಿ ಸಲ್ಲಿಸಲು ಕೋರಲಾಗಿದೆ.

**ವಿಶೇಷ ಸೂಚನೆ :–** ಮಾನ್ಯ ಸದಸ್ಯರು / ಗ್ರಾಹಕರು ತಮ್ಮ ಚಾಲ್ತಿ ಖಾತೆ ಹಾಗೂ ಉಳಿತಾಯ ಖಾತೆಗಳ ಕೆ.ವೈ.ಸಿ. ಯ ವಾರ್ಷಿಕ ನವೀಕರಣಕ್ಕೆ ಸಂಬಂಧಪಟ್ಟಂತೆ ಇತ್ತೀಚಿನ ಭಾವಚಿತ್ರ, ಗುರುತಿನ ಚೀಟಿ ಹಾಗೂ ವಿಳಾಸ ದೃಡೀಕರಣ ದಾಖಲೆಗಳನ್ನು ತಾವು ಖಾತೆ ನಿರ್ವಹಿಸುತ್ತಿರುವ ಶಾಖೆಗಳಲ್ಲಿ ನೀಡಿ ತಮ್ಮ ಖಾತೆಯನ್ನು ಚಾಲ್ತಿಯಲ್ಲಿರಿಸಿಕೊಳ್ಳಲು ಸೂಚಿಸಲಾಗಿದೆ. ಹೀಗೆ ಮಾಡಲು ತಪ್ಪಿದ್ದಲ್ಲಿ ತಮ್ಮ ಖಾತೆಯನ್ನು ನಿಷ್ಕ್ರಿಯಗೊಳಿಸಲಾಗುವುದು ಹಾಗೂ ಹತ್ತು ವರ್ಷಗಳ ಬಳಿಕ ಭಾರತೀಯ ರಿಸರ್ವ್ ಬ್ಯಾಂಕಿನ ಡಿ.ಈ.ಎ.ಎಫ್ ಖಾತೆಗೆ ವರ್ಗಾಯಿಸಲಾಗುವುದು.

### ಠೇವಣಿಗಳ ಮೇಲಿನ ಬಡ್ಡಿ ದರಗಳು

| ವಿವರ | ಸಾಮಾನ್ಯ ವರ್ಗ | ಹಿರಿಯ ನಾಗರೀಕರಿಗೆ | 80 ವರ್ಷ ಹಾಗೂ ಮೇಲ್ಪಟ್ಟ ಹಿರಿಯ ನಾಗರೀಕ ಠೇವಣಿದಾರರಿಗೆ |
|---|---|---|---|
| 31 ದಿನಗಳಿಂದ 90 ದಿನಗಳವರೆಗೆ | 4.00% | 4.50% | 4.75% |
| 91 ದಿನಗಳಿಂದ 180 ದಿನಗಳವರೆಗೆ | 4.75% | 5.25% | 5.50% |
| 181 ದಿನಗಳಿಂದ 365 ದಿನಗಳವರೆಗೆ | 6.25% | 6.75% | 7.00% |
| 1 ವರ್ಷದ ಮೇಲ್ಪಟ್ಟು 2 ವರ್ಷಗಳವರೆಗೆ | 7.10% | 7.60% | 7.85% |
| 2 ವರ್ಷದ ಮೇಲ್ಪಟ್ಟು 3 ವರ್ಷಗಳವರೆಗೆ | 6.50% | 7.00% | 7.25% |
| 3 ವರ್ಷದ ಮೇಲ್ಪಟ್ಟು 5 ವರ್ಷಗಳವರೆಗೆ | 7.05% | 7.55% | 7.80% |
| ಉಳಿತಾಯ ಖಾತೆ | 2.50% | 2.50% | 2.50% |

## ಬ್ಯಾಂಕಿನ ಉಪವಿಧಿಗಳಿಗೆ (ಬೈಲಾಗೆ) ಸೂಚಿಸಿರುವ ಕೆಲವೊಂದು ತಿದ್ದುಪಡಿ.

The KCS Act, 1959, was amended vide Gazette Notification dated September 12, 2025. Based on the Amendment to the KCS Act the below mentioned byelaw amendment is recommended.

| Sl. No. | Existing | Amended |
|---|---|---|
| 1 | **4. INTERPRETATION OF WORDS :**<br>(28) ‘ Delegate’ means a director of the bank to represent it in other cooperative societies and vote in the general meeting and to contest or propose or second in the election of the co-operative society to which he is appointed as delegate.<br>(28) “ಡೇಲಿಗೇಟ್” ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ.” | **4. INTERPRETATION OF WORDS :**<br>(28) ‘Delegate’ means a member of the bank to represent it in other cooperative societies and vote in the general meeting and to contest or propose or second in the election of the co-operative society to which he is appointed as delegate.<br>(28) “ಡೇಲಿಗೇಟ್” ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ “‘ಸದಸ್ಯ”. |
| 2 | **MINIMUM SERVICES OR FACILITIES TO BE UTILIZED BY A MEMBER:**<br>ಒಬ್ಬ ಸದಸ್ಯ, ಒಬ್ಬ ಪ್ರತಿನಿಧಿ ಅಥವಾ ಒಬ್ಬ ನಿಯೋಜಿತ ವಾರ್ಷಿಕ ಸರ್ವಸದಸ್ಯರ ಸಭೆಗಳಿಗೆ ಹಾಜರಾಗುವುದು ಹಾಗೂ ಕೆಳಗೆ ನಿರ್ದಿಷ್ಟ ಪಡಿಸಿರುವ ಕನಿಷ್ಟ ಸೇವೆ ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳುವುದು.<br>ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ಧಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಈ ಕೆಳಕಂಡ ಕನಿಷ್ಟ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂತಹ ಸದಸ್ಯರನ್ನು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಫರ್ಧಿಸುವ ಹಕ್ಕನ್ನು ಕಳೆದುಕೊಳ್ಳುತ್ತಾರೆ.<br>• ಕನಿಷ್ಟ ಠೇವಣಿ ರೂ.500/– ಅಥವಾ ಕನಿಷ್ಟ ಅವಧಿಯ ಮಾಸಿಕ ರೂ.100/– ಆವರ್ತ ಠೇವಣಿ.<br>ಅಥವಾ<br>• ಉಳಿತಾಯ ಖಾತೆಯಲ್ಲಿ ಒಂದು ವರ್ಷದಲ್ಲಿ ಎರಡು ವಹಿವಾಟುಗಳು ಮತ್ತು ಖಾತೆಯಲ್ಲಿ ಕನಿಷ್ಟ ರೂ.500/– ಧನ ಶಿಲ್ಕು ನಿರ್ವಹಣೆ.<br>ಅಥವಾ<br>• ನಿಯಮಗಳಿಗೆ ಒಳಪಟ್ಟು ಸಾಲ /ಭದ್ರತಾ ಕಪಾಟು ಪಡೆಯುವುದು.<br>• Minimum Deposit of Rs.500/- or Recurring deposit of Rs.100/- for a minimum period.<br>Or<br>• Minimum 2 transactions in Savings Bank Account with maintenance of minimum balance of Rs.500/-.<br>Or | **MINIMUM SERVICES OR FACILITIES TO BE UTIISED BY A MEMBER:**<br>(1) If offered by the bank, the following shall be the minimum services or facilities to be utilized by each member-<br>(i) A member shall have minimum share capital of one thousand rupees and;<br>(ii) A member shall have minimum deposit of Rs. 500/- or monthly recurring deposit of Rs. 100/- for a minimum period ; or if the member is desirous of availing a loan, the amount of loan requested subject to the limit fixed by the bank or locker facility.<br>or<br>(iii) A member shall have an active current or savings bank account with minimum balance maintained with the bank.<br>(2) The deposit mentioned above shall be the aggregate amount of all types of deposits (demand and time) maintained with the bank throughout the year.<br>(3) The direction issued by the Reserve Bank regarding ‘know your customer (KYC)’ shall be applied to every member of the bank.<br>(4) The loan amount shall be the limit sanctioned by the bank and utilised by the member. This shall be applicable for the entire loan period.<br>ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು:<br>(1) ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು–<br>i) ಸದಸ್ಯನು ಹೊಂದಿರತಕ್ಕ ಷೇರು ಬಂಡವಾಳವು ಒಂದು ಸಾವಿರ ರೂಪಾಯಿಗಳು ಮತ್ತು |

| Sl. No. | Existing | Amended |
|---|---|---|
| | • Availing minimum loan subject to rules/Avail Locker facility.<br>Or<br>ಬ್ಯಾಂಕಿನ ಉಪನಿಯಮ 11ರ ಅನ್ವಯ ಬ್ಯಾಂಕಿನ ಸದಸ್ಯರು ಕನಿಷ್ಟ ಷೇರು ವೊಬಲಗು ರೂ.1000/–ಗಳನ್ನು ಹೊಂದಿರಬೇಕಾಗಿರುತ್ತದೆ.<br>ರಿಸರ್ವ್ ಬ್ಯಾಂಕ್ ನೀಡಿರುವ ನಿಮ್ಮ ಗ್ರಾಹಕರನ್ನು ತಿಳಿಯಿರಿ (ಕೆವೈಸಿ) ನಿರ್ದೇಶನವನ್ನು ಪಾಲಿಸುವುದಕ್ಕೆ ಸಹಕರಿಸುವುದು.<br>The direction issued by the Reserve Bank regarding Know your customer (KYC) shall be followed by every member of the bank. | ii) ಸದಸ್ಯನು ಕನಿಷ್ಠ ಐದು ನೂರು ರೂಪಾಯಿಗಳ ಠೇವಣಿಯನ್ನು ಹೊಂದಿರುವುದು; ಅಥವಾ ಕನಿಷ್ಠ ಅವಧಿಯ ಮಾಸಿಕ ರೂ. 100/– ಗಳ ಆವರ್ತಕ ಠೇವಣಿ ಹೊಂದಿರತಕ್ಕದ್ದು.<br>ಅಥವಾ ಸದಸ್ಯನು ಸಾಲ ಪಡೆಯುವ ಅಗತ್ಯವಿದ್ದಲ್ಲಿ, ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ ಅಥವಾ ಭದ್ರತಾ ಕಪಾಟು ಪಡೆಯುವುದು.<br>ಅಥವಾ<br>iii) ಸದಸ್ಯನು ಕನಿಷ್ಠ ಠೇವಣಿಯೊಂದಿಗೆ ಸಕ್ರಿಯ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆ ಹೊಂದಿರತಕ್ಕದ್ದು.<br>(2) ಮೇಲೆ ತಿಳಿಸಿದ ಠೇವಣಿಯು ಸದಸ್ಯನು ವರ್ಷವಿಡೀ ಬ್ಯಾಂಕಿನಲ್ಲಿ ತೊಡಗಿಸಿದ ಎಲ್ಲಾ ತರಹದ ಠೇವಣಿ (ತಗಾದೆ ಮತ್ತು ಅವಧಿ) ಗಳನ್ನು ಒಳಗೊಂಡ ಒಟ್ಟು ಮೊತ್ತ ಆಗಿರತಕ್ಕದ್ದು.<br>(3) ರಿಸರ್ವ್ ಬ್ಯಾಂಕು ನೀಡಿರುವ 'ನಿಮ್ಮ ಗ್ರಾಹಕನನ್ನು ತಿಳಿಯಿರಿ (ಕೆ.ವೈ.ಸಿ)' ನಿರ್ದೇಶನವನ್ನು ಬ್ಯಾಂಕಿನ ಪ್ರತಿ ಸದಸ್ಯನಿಗೆ ಅನ್ವಯಿಸತಕ್ಕದ್ದು<br>(4) ಸಾಲದ ಮೊತ್ತವು ಬ್ಯಾಂಕು ಮಂಜೂರು ಮಾಡಿ ಸದಸ್ಯನು ಉಪಯೋಗಿಸಿಕೊಂಡ ಸಾಲದ ಮಿತಿಯಾಗಿರತಕ್ಕದ್ದು. ಇದು ಇಡೀ ಸಾಲದ ಅವಧಿಗೆ ಅನ್ವಯವಾಗತಕ್ಕದ್ದು. |
| 3 | **VOTING**<br>Defaulted members do not have the right to vote in the General Body meeting. A member shall be deemed to be a defaulter if he failed to pay arrears of any kind of dues to the bank whether as a borrower or as a surety or in any other capacity or to pay the defaulted amount due to the bank at least fifteen days before the date of such meeting after notice of not less than 45 days in this behalf has been issued to him.<br>ಸುಸ್ತಿದಾರ ಸದಸ್ಯರಿಗೆ ಸರ್ವಸದಸ್ಯರ ಸಭೆಯಲ್ಲಿ ಮತ ನೀಡುವ ಹಕ್ಕು ಇರುವುದಿಲ್ಲ. ಸದಸ್ಯನು ಸಾಲಗಾರನಾಗಿ ಅಥವಾ ಜಾಮೀನುದಾರನಾಗಿ ಅಥವಾ ಇನ್ನಾವುದೇ ಸ್ಥಾನದಲ್ಲಿದ್ದು ಯಾವುದೇ ರೀತಿಯ ಬಾಕಿಗಳನ್ನು ಬ್ಯಾಂಕಿಗೆ ಪಾವತಿಸಲು ವಿಫಲನಾದಾಗ ಅಥವಾ ಸರ್ವಸದಸ್ಯರ ಸಭೆಯ ದಿನಾಂಕಕ್ಕೆ ಕನಿಷ್ಟ 45 ದಿವಸಗಳಿಗೆ ಮುಂಚಿತವಾಗಿ ಬ್ಯಾಂಕಿಗೆ ಬರಬೇಕಾಗಿರುವ ಯಾವುದೇ ತರಹದ ಸುಸ್ತಿ ಬಾಕಿಯನ್ನು ತೀರುವಳಿ ಮಾಡಲು ನೋಟೀಸ್ ಕೊಟ್ಟು ಅಂತಹ ಸದಸ್ಯನು ಅಥವಾ ಜಾಮೀನುದಾರನು ಸಭಾ ದಿನಾಂಕದಿಂದ ಕನಿಷ್ಟ 15 ದಿವಸಗಳಿಗೆ ಮುಂಚಿತವಾಗಿ ಸುಸ್ತಿ ಬಾಕಿ ತೀರಿಸಲು ತಪ್ಪಿದಲ್ಲಿ ಅಂತಹ ಸದಸ್ಯನನ್ನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು. | **VOTING**<br>(3) A member who is a defaulter shall not have the right to vote. A member shall be deemed to be a defaulter and shall not have the right to vote at a general meeting / an election of the bank, if he has failed to pay overdue amount of loan or arrears of any kind due to the bank at least 20 days before the date of such meeting /election, after notice of not less than 30 days before the date of such meeting/ election has been given to him.<br>**ಮತ ನೀಡಿಕೆ :**<br>(3) ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ / ಚುನಾವಣೆಯ ದಿನಾಂಕದಿಂದ ಕನಿಷ್ಠ 30 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ / ಚುನಾವಣಾ ದಿನಾಂಕದಿಂದ ಕನಿಷ್ಠ 20 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ; |
| 4 | **ELECTION OF THE DIRECTORS OF THE BOARD :**<br>(2) The board of the bank shall –<br>(b) inform the co-operative election authority immediately on the occurrence of any casual vacancy in | **ELECTION OF THE DIRECTORS OF THE BOARD :**<br>(2) The board of the bank shall –<br>(b) Deleted<br>(6) Deleted |

| Sl. No. | Existing | Amended |
| --- | --- | --- |
| | the office of a representative or a director or an office-bearer due to death, resignation, disqualification etc., or for any other reason.<br>(6) The board of the bank shall inform the co-operative election authority to conduct elections to fill up any casual vacancy in the office of a representative or a director of the bank within sixty days from the date of it being notified about the occurrence of such casual vacancy.<br>**ಮಂಡಲಿಯ ನಿರ್ದೇಶಕರ ಚುನಾವಣೆ:**<br>(2) ಬ್ಯಾಂಕಿನ ಮಂಡಲಿಯು –<br>(ಬಿ)(ಬಿ). ಮರಣ, ರಾಜೀನಾಮೆ, ಅನರ್ಹತೆ ಇತ್ಯಾದಿ ಯಾವುದೇ ಕಾರಣದಿಂದ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಅಥವಾ ಪದಾಧಿಕಾರಿಗಳ ಪದದಲ್ಲಿ ಆಕಸ್ಮಿಕ ಖಾಲಿ ಸ್ಥಾನ ಉಂಟಾದಲ್ಲಿ, ಆ ಬಗ್ಗೆ ಕೂಡಲೇ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು<br>(6) ಬ್ಯಾಂಕಿನ ಯಾರೇ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಂತಹ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಆಡಳಿತ ಮಂಡಲಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | **ಮಂಡಲಿಯ ನಿರ್ದೇಶಕರ ಚುನಾವಣೆ**<br>(2) ಬ್ಯಾಂಕಿನ ಮಂಡಲಿಯು –<br>(ಬಿ) ಕೈಬಿಡಲಾಗಿದೆ<br>(6) ಕೈಬಿಡಲಾಗಿದೆ |
| 5 | **ELECTION OF OFFICE BEARERS:**<br>(2) The chief executive of the bank shall inform the co-operative election authority to conduct elections to the office of the President, Vice-President and any other office-bearer, if any, within fifteen days from the date of constitution or deemed constitution of the board after a general election.<br>**3) No Confidence Motion:**<br>A motion of no confidence against an office bearer of the bank may be moved only after two years of his assumption of office.<br>(i) No motion of no confidence shall be moved unless there is a written notice from not less than one-third of the elected members of the board of the bank.<br>(5) The board of the bank shall inform the co-operative election authority to conduct election to fill up any casual vacancy in the office of any office-bearer of the bank within sixty days from the date of it being notified about the occurrence of such casual vacancy.<br>**ಪದಾಧಿಕಾರಿಗಳ ಚುನಾವಣೆ :**<br>(2) ಸಾಮಾನ್ಯ ಚುನಾವಣೆಯ ತರುವಾಯ, ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷನ ಪದಕ್ಕೆ, ಉಪಾಧ್ಯಕ್ಷನ ಪದಕ್ಕೆ ಮತ್ತು ಇತರ ಯಾವುದೇ ಪದಾಧಿಕಾರಿಯ ಪದಕ್ಕೆ, ಇದ್ದಲ್ಲಿ, ಚುನಾವಣೆಗಳನ್ನು ನಡೆಸುವಂತೆ ಬ್ಯಾಂಕಿನ ಮುಖ್ಯಕಾರ್ಯನಿರ್ವಹಾಕನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | **ELECTION OF OFFICE BEARERS:**<br>2) The chief executive of the bank shall convene the Board meeting to conduct elections to the office of the President, Vice-President and any other office-bearer, if any, within fifteen days from the date of constitution or deemed constitution of the board after a general election. A member who is not a candidate for election of office of the President and Vice-President shall be chosen to preside over such meeting.<br>**3) No confidence Motion:**<br>A motion of no confidence against an office bearer of the bank may be moved only after two years of his assumption of office.<br>(i) No motion of no confidence shall be moved unless there is a written notice from not less than one-third members of the board of the bank. However, the professional directors shall not be part of the no confidence motion.<br>(5) Deleted<br>**ಪದಾಧಿಕಾರಿಗಳ ಚುನಾವಣೆ :**<br>(2) ಮುಖ್ಯಕಾರ್ಯನಿರ್ವಾಹಕನು ಸಾಮಾನ್ಯ ಚುನಾವಣೆಯ ತರುವಾಯ, ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷನ ಪದಕ್ಕೆ, ಉಪಾಧ್ಯಕ್ಷನ ಪದಕ್ಕೆ ಮತ್ತು ಇತರ ಯಾವುದೇ ಪದಾಧಿಕಾರಿಯ ಪದಕ್ಕೆ ಚುನಾವಣೆಗಾಗಿ ಮಂಡಲಿಯ ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ, ಉಪಾಧ್ಯಕ್ಷನ ಚುನಾವಣೆಗಾಗಿ ಅಭ್ಯರ್ಥಿಯಾಗಿರದ |

| Sl. No. | Existing | Amended |
|---|---|---|
| | (3) **ಅವಿಶ್ವಾಸ ನಿರ್ಣಯ:**<br>ಬ್ಯಾಂಕಿನ ಆಡಳಿತ ಮಂಡಳಿ ಪದಾಧಿಕಾರಿಗಳೊಬ್ಬರ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು, ಸದರಿ ಪದಾಧಿಕಾರಿ ಅಧಿಕಾರ ಸ್ವೀಕರಿಸಿ ಎರಡು ವರ್ಷಗಳಾಗಿರಬೇಕು.<br>(i) ಬ್ಯಾಂಕಿನ ಆಡಳಿತ ಮಂಡಳಿಯ ಚುನಾಯಿತ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ.<br>(5) ಬ್ಯಾಂಕಿನ ಯಾರೇ ಪದಾಧಿಕಾರಿಯ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಅಂಥ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಬ್ಯಾಂಕಿನ ಮಂಡಲಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು | ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು.<br>(3) **ಅವಿಶ್ವಾಸ ನಿರ್ಣಯ:**<br>ಬ್ಯಾಂಕಿನ ಆಡಳಿತ ಮಂಡಳಿ ಪದಾಧಿಕಾರಿಗಳೊಬ್ಬರ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು, ಸದರಿ ಪದಾಧಿಕಾರಿ ಅಧಿಕಾರ ಸ್ವೀಕರಿಸಿ ಎರಡು ವರ್ಷಗಳಾಗಿರಬೇಕು.<br>(i) ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ. ಬ್ಯಾಂಕಿನ ವೃತ್ತಿಪರ ನಿರ್ದೇಶಕ ಅವಿಶ್ವಾಸ ನಿರ್ಣಯದ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ.<br>(5) ಕೈಬಿಡಲಾಗಿದೆ |
| 6 | **DISQUALIFICATION FOR BEING ELECTED OR APPOINTED OR CONTINUED AS A DIRECTOR :**<br>No person shall be eligible for being elected or appointed or continued as a director of the board of the bank, if he-<br>(15) is subject to any other disqualification under the provisions of the Act, the rules and the byelaws.<br>**ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆಯಲು ಅನರ್ಹತೆ :**<br>ಬ್ಯಾಂಕಿನ ಯಾವುದೇ ಸದಸ್ಯನು ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆಯಲು<br>(15) ಕಾಯ್ದೆಯಡಿ, ನಿಯಮಗಳಡಿ ಮತ್ತು ಉಪವಿಧಿಗಳಡಿ ಬೇರೆ ಯಾವುದೇ ಅನರ್ಹತೆಗೆ ಗುರಿಯಾಗಿದ್ದರೆ –<br>– ಅನರ್ಹನಾಗತಕ್ಕದ್ದು. | **DISQUALIFICATION FOR BEING ELECTED OR APPOINTED OR CONTINUED AS A DIRECTOR :**<br>No person shall be eligible for being elected or appointed or continued as a director of the board of the bank, if he-<br>(1) failed to declare assets and liabilities of himself and his family for each financial year. The family includes the spouse, unmarried daughter, and undivided son.<br>(2) is subject to any other disqualification under the provisions of the Act, the rules and the byelaws.<br>**ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆಯಲು ಅನರ್ಹತೆ :**<br>ಬ್ಯಾಂಕಿನ ಯಾವುದೇ ಸದಸ್ಯನು ನಿರ್ದೇಶಕನಾಗಿ ಚುನಾಯಿತ–ನಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆ–ಯಲು ಈ ಕೆಳಕಂಡ ಸಂದರ್ಭಗಳಲ್ಲಿ ಅನರ್ಹರಾಗುತ್ತಾರೆ.<br>(1), ಪ್ರತಿ ಚುನಾಯಿತ ನಿರ್ದೇಶಕನು ನಿಯಮಿಸಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ ತನ್ನ ಮತ್ತು ತನ್ನ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸದಿದ್ದರೆ. (ಕುಟುಂಬ ಅಂದರೆ, ನಿರ್ದೇಶಕ ಮತ್ತು ಅವನ / ಅವಳ ಪತಿ / ಪತ್ನಿ ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ.)<br>(2) ಕಾಯ್ದೆ, ನಿಯಮ ಮತ್ತು ಉಪವಿಧಿಗಳಡಿ ಬೇರೆ ಯಾವುದೇ ಅನರ್ಹತೆಗೆ ಗುರಿಯಾಗಿದ್ದರೆ – |
| 7 | **VACANCIES ON THE BOARD:**<br>Any vacancy in the office of the director of the board on account of death, resignation, removal, disqualification or for any other reason, shall be filled up in the following manner-<br>(1) if the remaining term of office of the board is more than half of its original term, it shall be the responsibility | **VACANCIES ON THE BOARD:**<br>Any vacancy in the office of the director of the board on account of death, resignation, removal, disqualification or for any other reason, shall be filled up by the Board by nomination through co-option out of the same class of members in respect of which the casual vacancy has arisen. |

| Sl. No. | Existing | Amended |
|---|---|---|
| | of the cooperative election authority to conduct an election to fill up any vacancy in the office of the director of the board. However, the Board may fill up casual vacancy of the board by nomination out of same class of members in respect of which the casual vacancy has arisen till the election is held for such vacancy.<br>(2) if the remaining term of office of the board is less than half of its original term, the board may fillup casual vacancy of the board by nomination through co-option out of the same class of members in respect of which the casual vacancy has arisen within three months of the date of occurrence of such vacancy failing which the Registrar shall fill up the vacancy through nomination.<br>**ಮಂಡಲಿಯ ತೆರವಾದ ಸ್ಥಾನಗಳು :**<br>ಬ್ಯಾಂಕಿನ ಮಂಡಲಿಯ ನಿರ್ದೇಶಕರ ಪದದಲ್ಲಿ ಮರಣ, ರಾಜೀನಾಮೆ, ತೆಗೆದುಹಾಕುವಿಕೆ, ಅನರ್ಹತೆ ಅಥವಾ ಇನ್ನಾವುದೇ ಕಾರಣದಿಂದ ಮಂಡಲಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಕೆಳಗಿನಂತೆ ಭರ್ತಿಮಾಡತಕ್ಕದ್ದು.<br>(1) ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಳಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು.<br>(2) ಮಂಡಲಿಯ ಉಳಿದಿರುವ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಕಡಿಮೆ ಇರುವಲ್ಲಿ ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೋ ಅದೇ ವರ್ಗದ ಸದಸ್ಯರ ಪೈಕಿ ಸಹಮತದಿಂದ ನಾಮನಿರ್ದೇಶನ ಮಾಡುವ ಮೂಲಕ ಮಂಡಲಿಯಲ್ಲಿನ ಖಾಲಿ ಸ್ಥಾನವನ್ನು ಮಂಡಲಿಯುಮೂರು ತಿಂಗಳ ಒಳಗಾಗಿ ಭರ್ತಿ ಮಾಡಬಹುದು. ತಪ್ಪಿದಲ್ಲಿ ನಿಬಂಧಕರು ಅಂತಹ ಖಾಲಿ ಸ್ಥಾನಗಳನ್ನು ನಾಮ ನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು. | **ಮಂಡಲಿಯ ತೆರವಾದ ಸ್ಥಾನಗಳು :**<br>ಬ್ಯಾಂಕಿನ ಮಂಡಲಿಯ ನಿರ್ದೇಶಕರ ಪದದಲ್ಲಿ ಮರಣ, ರಾಜೀನಾಮೆ, ತೆಗೆದುಹಾಕುವಿಕೆ, ಅನರ್ಹತೆ ಅಥವಾ ಇನ್ನಾವುದೇ ಕಾರಣದಿಂದ ಮಂಡಲಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೋ ಅದೇ ವರ್ಗದ ಸದಸ್ಯರ ಪೈಕಿ ಸಹಮತದಿಂದ ನಾಮನಿರ್ದೇಶನ ಮಾಡುವ ಮೂಲಕ ಮಂಡಲಿಯು ಭರ್ತಿಮಾಡತಕ್ಕದ್ದು. |
